ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ/22/ಜೈಅಯೋ/2014

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು ದಿನಾಂಕ 25.09.2014

# ಸುತ್ತೋಲೆ

ವಿಷಯ : 2014–15ನೇ ಸಾಲಿನಲ್ಲಿ ನೂತನ ಸೌರಬೆಳಕು ಯೋಜನೆಯ ಅನುಷ್ಠಾನಕ್ಕಾಗಿ ಮಾರ್ಗಸೂಚಿಯ – ಕುರಿತು.

ಉಲ್ಲೇಖ : 1) ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ/5/ಗ್ರಾಇಂಕಾ 2009 ದಿನಾಂಕ 14.7.2009
2) ಸರ್ಕಾರಿ ಪತ್ರ ಸಂಖ್ಯೆ : ಗ್ರಾಅಪ/23/ಜೈಅಯೋ/2013 ದಿನಾಂಕ 21.10.2013

*****

## ಸೌರಬೆಳಕು ಯೋಜನೆ :–

### *1. ಉದ್ದೇಶಗಳು:*

*ಸೌರಬೆಳಕು ಯೋಜನೆಯ ಪ್ರಮುಖ ಉದ್ದೇಶವೆಂದರೆ ರಾಜ್ಯದಲ್ಲಿ ದಿನೇದಿನೇ ಏರುತ್ತಿರುವ ವಿದ್ಯುಚ್ಛಕ್ತಿ ಕೊರತೆಯನ್ನು ನೀಗಿಸುವುದಾಗಿದೆ. ವಿದ್ಯುಚ್ಛಕ್ತಿ ಕೊರತೆಯನ್ನು ನಿವಾರಿಸುವ ನಿಟ್ಟಿನಲ್ಲಿ ಪರ್ಯಾಯ ವ್ಯವಸ್ಥೆಯನ್ನು ಅನುಸರಿಸಬೇಕಾಗಿರುತ್ತದೆ. ಪರ್ಯಾಯ ವ್ಯವಸ್ಥೆಯೆಂದರೆ ನವೀಕರಿಸಬಹುದಾದ ಇಂಧನ ಮೂಲಗಳಿಂದ ಇಂಧನವನ್ನು ಪಡೆಯುವುದಾಗಿರುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರದಿಂದ 2009–10ನೇ ಸಾಲಿನಿಂದ ರಾಜ್ಯದಲ್ಲಿ ಪ್ರಾಯೋಗಿಕವಾಗಿ ಆಯ್ದ ಜಿಲ್ಲೆಗಳಲ್ಲಿ ಸೌರಬೆಳಕು ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಳೆದ 5 ವರ್ಷಗಳ ಸೌರಬೆಳಕು ಯೋಜನೆಯ ಅನುಷ್ಠಾನದಲ್ಲಿನ ಸಾಧಕ –ಭಾದಕಗಳನ್ನು ಪರಿಶೀಲಿಸಿ, ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಲು ಮಾರ್ಗಸೂಚಿಗಳನ್ನು ಪರಿಷ್ಕರಿಸಿದೆ.*

*ಈ ಯೋಜನೆಯಡಿ ಆಯ್ದ* ಗ್ರಾಮಗಳಲ್ಲಿ **ಸ್ಟಾಂಡ್ ಅಲೋನ್ ಬೀದಿ ದೀಪಗಳಿಗೆ ಪರ್ಯಾಯವಾಗಿ ಕೇಂದ್ರೀಕೃತ ಸೌರವಿದ್ಯುತ್ ಘಟಕ ಅಳವಡಿಸಿ, ಸಂಪೂರ್ಣ ಸೌರ ಬೀದಿ ದೀಪಗಳ ವಿದ್ಯುತ್ ಗ್ರಾಮವನ್ನಾಗಿ** ಘೋಷಿಸುವ ನಿಟ್ಟಿನಲ್ಲಿ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರದಿಂದ ಉದ್ದೇಶಿಸಲಾಗಿದೆ.

**2014–15 ನೇ ಸಾಲಿನಲ್ಲಿ ಯೋಜನೆಯ ಹೊಸ ಮಾದರಿ ಮತ್ತು ಅನುಷ್ಠಾನಕ್ಕಾಗಿ ಜಿಲ್ಲೆಗಳ ಆಯ್ಕೆ:**

ಈ ಹಿಂದಿನ **ಸ್ಟಾಂಡ್ ಅಲೋನ್ ಬೀದಿ ದೀಪಗಳ ವ್ಯವಸ್ಥೆಯನ್ನು ಬದಲಾಯಿಸಿ, ಕೇಂದ್ರೀಕೃತ ಸೌರ ಘಟಕ ಸ್ಥಾಪನೆಯ ಮಾದರಿ ಅಳವಡಿಸಲು ತೀರ್ಮಾನಿಸಲಾಗಿದೆ. ಅದರಂತೆ ಪ್ರಸ್ತುತ ಸಾಲಿನಲ್ಲಿ ಮೈಸೂರು, ಗದಗ, ಹಾವೇರಿ ಮತ್ತು ಬಾಗಲಕೋಟೆ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ.**

2. **ಪ್ರಾಯೋಗಿಕ ಜಿಲ್ಲೆಗಳಿಗೆ ನಿಗದಿಪಡಿಸಲಾದ ಗುರಿ :**

| ಕ್ರ.ಸಂ | ಪ್ರಾಯೋಗಿಕ ಜಿಲ್ಲೆ | ನಿಗದಿಪಡಿಸಿದ ಭೌತಿಕ ಗುರಿ | | ಗ್ರಾ.ಪಂ. ಕಟ್ಟಡಕ್ಕೆ ಸೌರ ಇಂಧನ ವ್ಯವಸ್ಥೆ (ದೀಪ ಮತ್ತು ಕಂಪ್ಯೂಟರ್ ಬಳಕೆಗೆ) | ನಿಗದಿ ಪಡಿಸಿದ ಆರ್ಥಿಕ ಗುರಿ (ರೂ. ಲಕ್ಷಗಳಲ್ಲಿ) |
|---|---|---|---|---|---|
| | | ಗ್ರಾಮಗಳ ಸಂಖ್ಯೆ | ಅಂದಾಜು ಬೀದಿ ದೀಪಗಳ ಸಂಖ್ಯೆ | | |
| 1 | 2 | 3 | 4 | 5 | 6 |
| 1 | ಮೈಸೂರು | 2 | 315 | 1 | 71.25 |
| 2 | ಹಾವೇರಿ | 2 | 315 | 1 | 71.25 |
| 3 | ಗದಗ | 2 | 315 | 1 | 71.25 |
| 4 | ಬಾಗಲಕೋಟೆ | 2 | 315 | 1 | 71.25 |
| ಒಟ್ಟು | | 8 | 1260 | 4 | 285.00 |

**ಯೋಜನೆ ಅನುಷ್ಠಾನ-ಸೌರ ಬೀದಿ ದೀಪಗಳಿಗೆ ಪರ್ಯಾಯ ಕೇಂದ್ರೀಕೃತ ಸೌರ ವಿದ್ಯುತ್ ವ್ಯವಸ್ಥೆ :**

ಜಿಲ್ಲೆಯಲ್ಲಿ ನೂತನ ಸೌರಬೆಳಕು ಯೋಜನೆಯ ಅನುಷ್ಠಾನಕ್ಕಾಗಿ ಆಯ್ಕೆ ಮಾಡಬೇಕಾದ ತಾಲ್ಲೂಕಿನಲ್ಲಿ 2 ಗ್ರಾಮಗಳಲ್ಲಿ ಸಂಪೂರ್ಣ ಸೌರ ಬೀದಿ ದೀಪಗಳ ಗ್ರಾಮ ಎಂದು ಘೋಷಿಸುವ ನಿಟ್ಟಿನಲ್ಲಿ **ಕೇಂದ್ರೀಕೃತ ಸೌರ ಘಟಕಗಳ ಸ್ಥಾಪನೆಗೆ ಬೇಕಾದ ಅವಶ್ಯ ಕಟ್ಟಡ / ಖಾಲಿ ನಿ ವೇಶನ ನೀಡುವಂತಹ ಗ್ರಾಮದಲ್ಲಿ** ಒಟ್ಟಾರೆ 150 (+/-10 ರಿಂದ 15%) ಸೌರ ಬೀದಿ ದೀಪಗಳನ್ನು ಅಳವಡಿಸಲು ಎರಡು ಗ್ರಾಮಗಳನ್ನು ಆಯ್ಕೆ ಮಾಡಬೇಕಾಗಿದ್ದು, ತಾಲ್ಲೂಕ ಮತ್ತು ಗ್ರಾಮಗಳ ಆಯ್ಕೆ ಪ್ರಕ್ರಿಯೆಯನ್ನು ಸರಳಗೊಳಿಸಲು ಈ ಕೆಳಗಿನ ಮಾನದಂಡಗಳಂತೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳುವುದು.

3. **ತಾಲ್ಲೂಕ / ಗ್ರಾಮಗಳ ಆಯ್ಕೆಯ ವಿಧಾನ :**

***3.1 ತಾಲ್ಲೂಕ ಆಯ್ಕೆ;***

ಜಿಲ್ಲೆಯ ಎಲ್ಲಾ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಕೆಳಕಂಡ ಮಾಹಿತಿಗಳ ಅಂಕಿ-ಅಂಶಗಳನ್ನು ಸಂಗ್ರಹಿಸಿ, ಕ್ರೋಡೀಕರಿಸಿ, ನಿಗದಿಪಡಿಸಿದ ಸಮಯದೊಳಗಾಗಿ ಯೋಜನೆ ಅನುಷ್ಠಾನಕ್ಕಾಗಿ ಒಂದು ತಾಲ್ಲೂಕನ್ನು ಆಯ್ಕೆ ಮಾಡಬೇಕಾಗಿದೆ.

3.1.1 ಜಿಲ್ಲಾ ಕೇಂದ್ರದಿಂದ ತಾಲ್ಲೂಕಿನ ಕೇಂದ್ರ ಸ್ಥಾನಕ್ಕೆ ಇರುವ ದೂರ (ಹೆಚ್ಚಿನ ದೂರಕ್ಕೆ ಆದ್ಯತೆ)
3.1.2 ತಾಲ್ಲೂಕಿನಲ್ಲಿ ಎಸ್.ಸಿ./ಎಸ್.ಟಿ ಜನಸಂಖ್ಯೆಯ ವಿವರ (ಹೆಚ್ಚಿನ ಜನಸಂಖ್ಯೆಗೆ ಆದ್ಯತೆ)
3.1.3 ದುರ್ಗಮ ಪ್ರದೇಶ ( ಹೆಚ್ಚಿನದಕ್ಕೆ ಆದ್ಯತೆ)
3.1.4 *'ನಿರ್ಮಲ ಗ್ರಾಮ ಪುರಸ್ಕಾರ ಪ್ರಶಸ್ತಿ' ಪಡೆದ ಗ್ರಾಮ ಪಂಚಾಯತ್‌ಗಳ ಸಂಖ್ಯೆ (ಹೆಚ್ಚಿನದಕ್ಕೆ ಆದ್ಯತೆ)*

### 3.2 ಗ್ರಾಮದ ಆಯ್ಕೆ:

ಆಯ್ಕೆಯಾದ ತಾಲ್ಲೂಕಿನಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾಲ್ಲೂಕ ಪಂಚಾಯತ್ ಇವರು ಈ ಕೆಳಕಂಡ ಅಂಕಿ-ಅಂಶಗಳನ್ನು ಸಂಗ್ರಹಿಸಿ, ಮಾಹಿತಿಗಳನ್ನು ಕ್ರೋಢೀಕರಿಸಿ ಅಂತಿಮವಾಗಿ ಯೋಜನೆ ಅನುಷ್ಠಾನಕ್ಕಾಗಿ ಎರಡು ಗ್ರಾಮಗಳ ಆಯ್ಕೆಯನ್ನು ನಿಗದಿಪಡಿಸಿದ ಸಮಯದೊಳಗಾಗಿ ಅಂತಿಮಗೊಳಿಸುವುದು.

- ಆಯ್ಕೆ ಮಾಡಬೇಕಾದ ಗ್ರಾಮಗಳ ಬೀದಿ ದೀಪಗಳಿಗೆ ಪರ್ಯಾಯವಾಗಿ ಸೌರ ವಿದ್ಯುತ್ ಘಟಕದಿಂದ ವಿದ್ಯುದ್ದೀಕರಣಕ್ಕಾಗಿ 150 ರಿಂದ 175 ಬೀದಿ ದೀಪಗಳನ್ನು ಹೊಂದಿರುವ ಗ್ರಾಮಗಳ ಪಟ್ಟಿ ತಯಾರಿಕೆ.
- ಆಯ್ಕೆಯಾದ ಪಟ್ಟಿಯಲ್ಲಿನ ಗ್ರಾಮದ ಗ್ರಾಮ ಪಂಚಾಯತಗಳಿಗೆ 'ನಿರ್ಮಲ ಗ್ರಾಮಪ್ರಶಸ್ತಿ' ಪಡೆದಿದ್ದಲ್ಲಿ ಯೋಜನೆ ಅನುಷ್ಠಾನಕ್ಕಾಗಿ ಪ್ರಥಮ ಆದ್ಯತೆ ನೀಡುವುದು.
- ಆಯ್ಕೆಯಾದ ಪಟ್ಟಿಯಲ್ಲಿನ ಗ್ರಾಮಗಳಲ್ಲಿ 2013-14 ನೇ ಸಾಲಿಗೆ ಮಾಡಿದ ಕರವಸೂಲಿ ವಿವರ (ಹೆಚ್ಚಿನದಕ್ಕೆ ಆದ್ಯತೆ).
- ಆಯ್ಕೆಯಾದ ಪಟ್ಟಿಯಲ್ಲಿನ ಗ್ರಾಮಗಳಿಂದ ತಾಲ್ಲೂಕಿನ ಕೇಂದ್ರ ಸ್ಥಾನಕ್ಕೆ ಇರುವ ದೂರ (ಹೆಚ್ಚಿನ ದೂರಕ್ಕೆ ಆದ್ಯತೆ).
- ಆಯ್ಕೆಯಾದ ಪಟ್ಟಿಯಲ್ಲಿನ ಗ್ರಾಮದ ಎಸ್.ಸಿ./ಎಸ್.ಟಿ ಜನಸಂಖ್ಯೆಯ ವಿವರ (ಹೆಚ್ಚಿನ ಜನಸಂಖ್ಯೆಗೆ ಆದ್ಯತೆ).
- ಆಯ್ಕೆಯಾದ ಪಟ್ಟಿಯಲ್ಲಿನ ಗ್ರಾಮದ ಸ್ವ-ಸಹಾಯ ಗುಂಪುಗಳ ಸಂಖ್ಯೆ (ಹೆಚ್ಚಿನದಕ್ಕೆ ಆದ್ಯತೆ).
- ದುರ್ಗಮ ಪ್ರದೇಶ (ಹೆಚ್ಚಿನದಕ್ಕೆ ಆದ್ಯತೆ).

ಮೇಲ್ಕಂಡಂತೆ ಅಂಕಿ-ಅಂಶಗಳ ಕ್ರೋಢೀಕರಣದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಿದ ತಾಲ್ಲೂಕಿನ ಎರಡು ಗ್ರಾಮಗಳನ್ನು ಯೋಜನೆ ಅನುಷ್ಠಾನಕ್ಕಾಗಿ ಅಂತಿಮವಾಗಿ ಪರಿಗಣಿಸುವುದು.

ಸೂಚನೆ: **ಆಯ್ಕೆಯಾದ ತಾಲ್ಲೂಕಿನಲ್ಲಿ ಒಂದು ಗ್ರಾಮ ಪಂಚಾಯಿತಿಯ ಕಟ್ಟಡಕ್ಕೆ ಸೌರ ವಿದ್ಯುತ್ ಘಟಕ ಅಳವಡಿಸಿ, ಕಂಪ್ಯೂಟರ್ / ಪ್ರಿಂಟರ್ ಮತ್ತು ದೀಪಗಳ ಇಂಧನ ಪೂರೈಕೆಗೆ ಘಟಕವನ್ನು ಯೋಜನೆಯ ಕ್ರಿಯಾ ಯೋಜನೆಯಲ್ಲಿ ಅಳವಡಿಸಲು ಜಿಲ್ಲಾ ಪಂಚಾಯತ್‌ನಿಂದ ಕ್ರಮ ಕೈಗೊಳ್ಳುವುದು.**

## 4. ಯೋಜನೆಯ ಅನುಷ್ಠಾನದ ರೂಪು ರೇಷೆಗಳು :

### 4.1 ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ರಚನೆ :

| | | |
|---|---|---|
| 01 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| 02 | ಉಪ ಕಾರ್ಯದರ್ಶಿ(ಅಭಿವೃದ್ದಿ)/ಯೋಜನಾ ನಿರ್ದೇಶಕರು- ಡಿ.ಆರ್.ಡಿ.ಎ. (ಜಿ.ಪಂ.ನಲ್ಲಿ ಗ್ರಾಮೀಣ ಇಂಧನ ಕಾರ್ಯಕ್ರಮಗಳ ಉಸ್ತುವಾರಿ ಹೊಂದಿರುವ ಅಧಿಕಾರಿ) | ಸದಸ್ಯರು |
| 03 | ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ | ಸದಸ್ಯರು |
| 04 | ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ಪ್ರತಿನಿಧಿ. | ಸದಸ್ಯರು |
| 05 | ಕಾರ್ಯಪಾಲಕ ಅಭಿಯಂತರರು, ಎಸ್ಕಾಂ. | ಸದಸ್ಯರು |
| 06 | ಯೋಜನಾ ಅಭಿಯಂತರರು, ಸಗ್ರಾಇಂಕಾ, ಜಿಲ್ಲಾ ಪಂಚಾಯತ್ | ಸದಸ್ಯ ಕಾರ್ಯದರ್ಶಿ |

4.1 2014-15 ನೇ ಸಾಲಿನ ನೂತನ ಸೌರಬೆಳಕು ಯೋಜನೆ ಕಾರ್ಯಕ್ರಮ ಅನುಷ್ಠಾನಕ್ಕಾಗಿ ನಿಗದಿಪಡಿಸಿದ ವೇಳಾಪಟ್ಟಿಯಂತೆ ಲಗತ್ತಿಸಿದ ಚಟುವಟಿಕೆಗಳ ವೇಳಾ ಪಟ್ಟಿಯಂತೆ ಪ್ರಗತಿ ಸಾಧಿಸುವ ಜವಾಬ್ದಾರಿಯು ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯದ್ದಾಗಿರುತ್ತದೆ.

4.2 ಪ್ರಾಯೋಗಿಕ ತಾಲ್ಲೂಕು ಆಯ್ಕೆಯ ತರುವಾಯ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯು ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯಾಗಿ ಮಾರ್ಪಾಟುಗೊಂಡು ಕಾರ್ಯ ನಿರ್ವಹಿಸುವುದು.

4.3 ಪ್ರಾಯೋಗಿಕ ಜಿಲ್ಲೆಗಳಲ್ಲಿ ರಚಿಸಲಾದ ಆಯ್ಕೆ ಸಮಿತಿಯು ಆಯಾ ಜಿಲ್ಲೆಯಲ್ಲಿನ ಒಂದು ತಾಲ್ಲೂಕನ್ನು ಆಯ್ಕೆ ಮಾಡಿ, ಆಯ್ದ ತಾಲ್ಲೂಕಿನಲ್ಲಿನ 2 ಗ್ರಾಮಗಳನ್ನು ಸಂಪೂರ್ಣ ಸೌರ ಬೀದಿ ದೀಪಗಳ ಗ್ರಾಮ ಎಂದು ಘೋಷಿಸುವ ನಿಟ್ಟಿನಲ್ಲಿ ಕ್ರಮವಹಿಸುವುದು.

4.4 ಪ್ರಾಯೋಗಿಕ ತಾಲ್ಲೂಕು ಆಯ್ಕೆಯ ನಂತರದಲ್ಲಿ ಆಯ್ದ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯಲ್ಲಿ ಸದಸ್ಯರಾಗಿ ಮುಂದುವರಿಯುತ್ತಾರೆ.

4.5 ಜಿಲ್ಲಾಮಟ್ಟದ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾದ ತಾಲ್ಲೂಕು ಮತ್ತು ಗ್ರಾಮಗಳನ್ನು ಜಿಲ್ಲಾ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯತಕ್ಕದ್ದು.

4.6 ಆಯ್ಕೆಯಾದ ತಾಲ್ಲೂಕಿನಲ್ಲಿ ಒಂದು ಗ್ರಾಮ ಪಂಚಾಯತ್ ಕಟ್ಟಡದಲ್ಲಿನ ಕೇಂದ್ರೀಕೃತ ಸೌರ ವಿದ್ಯುತ್ ಘಟಕದಲ್ಲಿನ ಬ್ಯಾಟರಿಗಳ ನಿರ್ವಹಣೆಗಾಗಿ ಬೇಕಾಗುವ ಡಿಸ್ಟಿಲ್ ವಾಟರ್ ಉತ್ಪಾದನೆಗಾಗಿ ಯೋಗ್ಯವಾದ ಒಂದು ಸೌರ ಸ್ಟಿಲ್ ಉಪಕರಣವನ್ನು ಕ್ರಿಯಾ ಯೋಜನೆಯಡಿ ಅಳವಡಿಸಿಕೊಳ್ಳುವುದು.

4.7 ಗ್ರಾಮಕ್ಕೆ ಸೇರಿದ ಕೇಂದ್ರೀಕೃತ ಸೌರ ಘಟಕದಿಂದ ಗುಂಪು ಮನೆಗಳ (Cluster Houses) ಬೀದಿ ದೀಪಗಳಿಗೆ ಸೌರ ವಿದ್ಯುತ್ ಘಟಕಗಳಿಂದ ವಿದ್ಯುತ್ ಒದಗಿಸಲು 1ಕಿ.ವ್ಯಾಟ್, 2ಕಿ.ವ್ಯಾಟ್, 3ಕಿ.ವ್ಯಾಟ್, 5ಕಿ.ವ್ಯಾಟ್ & 10ಕಿ.ವ್ಯಾಟ್‌ಗಳ ತಾಂತ್ರಿಕ ವಿನ್ಯಾಸಗಳುಳ್ಳ ಮಾದರಿಗಳನ್ನು ಇ-ಟೆಂಡರನಲ್ಲಿ ಅಳವಡಿಸಲಾಗಿದ್ದು, ಗ್ರಾಮಗಳಲ್ಲಿನ ಅವಶ್ಯಕತೆಗನುಗುಣವಾಗಿ ಕ್ಲಸ್ಟರಗಳಲ್ಲಿ ಅಳವಡಿಸತಕ್ಕದ್ದು. ಅಲ್ಲದೇ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಕನಿಷ್ಟ ಶೇ.10ರ ಪ್ರಮಾಣದೊಳಗೆ ಸ್ಟಾಂಡ್ ಅಲೋನ್ ಸೌರ ಬೀದಿ ದೀಪಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಲು ಅವಕಾಶ ಮಾಡಿಕೊಳ್ಳುವ ಪರಿಶೀಲಿಸಿ ಕ್ರಮವಹಿಸುವುದು. ಈ ಅಂಶಗಳನ್ನು ಯೋಜನಾ ವರದಿ ತಯಾರಿಕೆಯಲ್ಲಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

4.8 ಶೇ. 30% ರಷ್ಟು ಕೇಂದ್ರ ಸಹಾಯಧನದಿಂದ ಹೆಚ್ಚುವರಿ ಗ್ರಾಮಕ್ಕೆ ಕೇಂದ್ರೀಕೃತ ಸೌರ ಬೀದಿ ದೀಪಗಳ ಘಟಕವನ್ನು ಅಳವಡಿಸಲು ಸಹಾಯಧನದ ಅಂದಾಜು ಮೊತ್ತಕ್ಕೆ ಯೋಜನಾ ವರದಿಯೊಂದಿಗೆ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿಕೊಳ್ಳತಕ್ಕದ್ದು ಹಾಗೂ ಕೇಂದ್ರ ಸಹಾಯಧನ ಬಿಡುಗಡೆಯಾದ ನಂತರ ಹೆಚ್ಚುವರಿ ಕ್ರಿಯಾ ಯೋಜನೆ ಪ್ರಕಾರ ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.

4.9 ಸಂಬಂಧಿಸಿದ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಯೋಜನಾ ಅಭಿಯಂತರರು-ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮ ಇವರ ಸಹಕಾರದೊಂದಿಗೆ ಆಯ್ಕೆಯಾದ ಗ್ರಾಮಗಳಲ್ಲಿ ಸಮಗ್ರ ಯೋಜನಾ ವರದಿಯೊಂದಿಗೆ ಎರಡು ಗ್ರಾಮಗಳಲ್ಲಿ ಕೇಂದ್ರೀಕೃತ ಸೌರ ಬೀದಿ ದೀಪಗಳ ಅಳವಡಿಕೆಯ ಕ್ರಿಯಾ ಯೋಜನೆಯನ್ನು ತಯಾರಿಸತಕ್ಕದ್ದು.

4.10 ಸದರಿ ಯೋಜನಾ ವರದಿ ಮತ್ತು ಕ್ರಿಯಾ ಯೋಜನೆಯನ್ನು ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯ ಅನುಮೋದನೆ ಪಡೆದುಕೊಂಡು **ಕೇಂದ್ರ ಸರ್ಕಾರದ ಶೇ. 30 ರಷ್ಟು ಸಹಾಯಧನ ಪಡೆಯುವ ಸಲುವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ಬೆಂಗಳೂರು ಇವರಿಗೆ ಪೂರ್ವಭಾವಿಯಾಗಿ ಸಹಾಯಧನ ಬಿಡುಗಡೆಗಾಗಿ ಜಿ.ಪಂ.ನಿಂದ ಪ್ರಸ್ತಾವನೆಗಳನ್ನು ಸಲ್ಲಿಸತಕ್ಕದ್ದು.**

4.11 ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯಲ್ಲಿ ಅನುಮೋದಿತಗೊಂಡ **ಕ್ರಿಯಾ ಯೋಜನೆಗೆ, ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮದನ್ವಯ ಮತ್ತು ಸೌರ ಬೀದಿ ದೀಪಗಳ ಅನುಷ್ಠಾನ ಕುರಿತಂತೆ ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವದೆಹಲಿರವರ ಕೇಂದ್ರೀಕೃತ ಸೌರ ವಿದ್ಯುತ್ ಘಟಕ/ಬೀದಿ ದೀಪಗಳ ಮಾದರಿಯನ್ವಯ MNRE-ಅನುಮೋದಿತ ಉತ್ಪಾದಕ ಕಂಪನಿಗಳು, ಮಾತ್ರ ಸದರಿ ಕಾರ್ಯಕ್ರಮದ ಅನುಷ್ಠಾನದ ಇ-ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಹಾಗೂ ಪ್ರಾರಂಭಿಕ ಐದು ವರ್ಷಗಳ ಅವಧಿಯವರೆಗೆ ಸೌರ ಘಟಕ ಅಳವಡಿಸುವ ಕಂಪನಿಯವರು ಘಟಕದ ಸಂಪೂರ್ಣ ದೈನಂದಿನ ಮತ್ತು ಕಾಲ ಕಾಲದ ಕಾರ್ಯ ನಿರ್ವಹಣೆಯ ಜವಾಬ್ದಾರಿ ಮತ್ತು ಘಟಕದ ಗ್ಯಾರಂಟಿಯೊಂದಿಗಿನ ಷರತ್ತಿಗೊಳಪಟ್ಟು ಕೇಂದ್ರೀಕೃತ ಎಲ್.ಇ.ಡಿ. ಸೌರ ಬೀದಿ ದೀಪ ಘಟಕಗಳನ್ನು ಅಳವಡಿಸತಕ್ಕದ್ದು.**

4.12 ಸೌರಬೆಳಕು ಯೋಜನೆಯಡಿ ನಿಗದಿಪಡಿಸಿ ಲಗತ್ತಿಸಿದ ನಿರ್ದಿಷ್ಟ ಟೆಂಡರ್ ನಮೂನೆಯನ್ವಯ **ಇ-ಟೆಂಡರ್/ಇ-ಪ್ರಕ್ಯೂರ್‌ಮೆಂಟ್ ಮೂಲಕ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸತಕ್ಕದ್ದು.**

4.13 ಕಾರ್ಯಕ್ರಮದ ಪ್ರಯೋಜನವನ್ನು ಗ್ರಾಮೀಣ ಜನತೆಗೆ ನೀಡುವ ನಿಟ್ಟಿನಲ್ಲಿ ಕಡ್ಡಾಯವಾಗಿ 5 ವರ್ಷಗಳ ಗ್ಯಾರೆಂಟಿಯೊಂದಿಗಿನ ಅವಶ್ಯಕ ಷರತ್ತಿಗೊಳಪಟ್ಟು ಕಾರ್ಯಾದೇಶವನ್ನು ಜಿಲ್ಲಾ ಮಟ್ಟದಲ್ಲಿ ನೀಡುವುದು.

4.14 ಯೋಜನೆಯಡಿ ಸೌರ ಬೀದಿ ದೀಪಗಳ ಅನುಷ್ಠಾನ ಮತ್ತು ದೈನಂದಿನ ಮತ್ತು ಕಾಲ ಕಾಲಕ್ಕೆ ಕಾರ್ಯನಿರ್ವಹಣೆಯ ಜವಾಬ್ದಾರಿಯನ್ನು ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಸಮರ್ಪಕವಾಗಿ ನಿರ್ವಹಿಸತಕ್ಕದ್ದು. ಯೋಜನಾ ಅನುಷ್ಠಾನದ ವೇಳೆಯಲ್ಲಿ ಯೋಜನಾ ಅಭಿಯಂತರರು-ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮ ಇವರು ಮೇಲ್ವಿಚಾರಣೆಯನ್ನು ನಿರ್ವಹಿಸತಕ್ಕದ್ದು.

4.15 ಕಾರ್ಯಕ್ರಮದ ಅನುಷ್ಠಾನ ಕುರಿತಂತೆ ಕಾಲ ಕಾಲಕ್ಕೆ ವರದಿಯನ್ನು ಕಡ್ಡಾಯವಾಗಿ ಸರ್ಕಾರಕ್ಕೆ ಸಲ್ಲಿಸುವುದು. ಪ್ರಗತಿ ವರದಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನೆಲೆಸಿರುವ ಪ್ರದೇಶಗಳಲ್ಲಿ ಸೌರ ಬೀದಿ ದೀಪ ಅಳವಡಿಸಿದ್ದಲ್ಲಿ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಘಟಕದಡಿ ನಿಯಮಾನುಸಾರ ವೆಚ್ಚ ಮಾಡಬೇಕಾಗಿರುವ ಅನುದಾನದ ಬಗ್ಗೆ ಸಹ ವರದಿ ಮಾಡತಕ್ಕದ್ದು.

4.16 ಕಾಲ ಕಾಲಕ್ಕೆ ಎಂ.ಎನ್.ಆರ್.ಇ. ರವರು ಕೇಂದ್ರೀಕೃತ ಸೌರ ಘಟಕಗಳಿಗೆ ಅನುಮೋದಿಸಿರುವ ನಿರ್ದಿಷ್ಟ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆಗಳನ್ನು ಅನುಷ್ಠಾನ ಗೊಳಿಸತಕ್ಕದ್ದು. ತಾಂತ್ರಿಕ ಬಿಡ್ಡನ್ನು ಪರಿಶೀಲಿಸುವ ಸಂದರ್ಭದಲ್ಲಿಯೇ ಮಾದರಿ ಉಪಕರಣವನ್ನು ಪರಿಶೀಲನೆಗೆ ಒಳಪಡಿಸತಕ್ಕದ್ದು.

4.17 ನೂತನ ಸೌರ ಬೆಳಕು ಯೋಜನೆಯ ಯಶಸ್ವಿ ಅನುಷ್ಠಾನದಲ್ಲಿ ಯೋಜನೆಯ ಪ್ರಾಥಮಿಕ ಹಂತದಿಂದ ಕೊನೆಯ ಹಂತದವರೆಗೆ ಸಂಬಂಧಿಸಿದ ಗ್ರಾಮ ಪಂಚಾಯತ್‌ಗಳ ಅಭಿವೃದ್ಧಿ ಅಧಿಕಾರಿಗಳು ಹಾಗೂ ಯೋಜನಾ ಅಭಿಯಂತರರು ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಆಯ್ಕೆಯಾದ ಗ್ರಾಮದ ಗ್ರಾಮ ಪಂಚಾಯತ್‌ನಿಂದ ಅಗತ್ಯ ಸಿಬ್ಬಂದಿಯನ್ನು ಸ್ಥಾವರದ ದೈನಂದಿನ ನಿರ್ವಹಣೆ ಮತ್ತು ಕಾಲ ಕಾಲದ ನಿರ್ವಹಣೆಗೆ ಒದಗಿಸತಕ್ಕದ್ದು. ಯೋಜನೆಯು ಪೂರ್ಣಗೊಂಡ ನಂತರ ಸದರಿ ಸ್ಥಾವರ ಘಟಕವು ಗ್ರಾಮ ಪಂಚಾಯತ್ ಸ್ವತ್ತಾಗಿದ್ದು, ಇದರ ಸಂಪೂರ್ಣ ಜವಾಬ್ದಾರಿಯು ಗ್ರಾಮ ಪಂಚಾಯತಿ ಯದ್ದಾಗಿರುತ್ತದೆ.

## 5. ಕೇಂದ್ರೀಕೃತ ಸೌರ ವಿದ್ಯುತ ಬೀದಿ ದೀಪಗಳ ನಿರ್ವಹಣೆ :

5.1 **ಕೇಂದ್ರೀಕೃತ ಸೌರ ಬೀದಿ ದೀಪ ಘಟಕಗಳ ನಿರ್ವಹಣೆಯನ್ನು ಪ್ರಾರಂಭದ 5 ವರ್ಷಗಳವರೆಗೆ ಸಂಬಂಧಿತ ಅರ್ಹ ಟೆಂಡರ್‌ದಾರರಿಂದ ಸಂಪೂರ್ಣ ದೈನಂದಿನ ಮತ್ತು ಕಾಲ ಕಾಲದ ಕಾರ್ಯ ನಿರ್ವಹಣೆ ಯೊಂದಿಗೆ ನಿರ್ವಹಿಸತಕ್ಕದ್ದು. ಪ್ರತಿ ಘಟಕ ಕಟ್ಟಡದ ಹೊರಭಾಗದಲ್ಲಿ ನಿರ್ವಹಣಾ ಸಂಸ್ಥೆಯ ಉಚಿತ ದೂರವಾಣಿ ಕರೆ ಸಂಖ್ಯೆ ಮತ್ತು ಇಲಾಖೆಯ ಉಚಿತ ದೂರವಾಣಿ ಕರೆ ಸಂಖ್ಯೆ: 1800 425 8666 ನ್ನು ದೊಡ್ಡ ಅಕ್ಷರಗಳಲ್ಲಿ ಬರೆಯತಕ್ಕದ್ದು. ನಂತರದ ಅವಧಿಯಿಂದ ಸದರಿ ಸೌರ ಘಟಕದ ನಿರ್ವಹಣೆಯನ್ನು ಆಯಾ ಗ್ರಾಮ ಪಂಚಾಯಿತಿಗಳೇ ನಿರ್ವಹಿಸತಕ್ಕದ್ದು ಹಾಗೂ** ಪ್ರಾರಂಭದ ವರ್ಷದಿಂದ ಭವಿಷ್ಯದಲ್ಲಿ ಸೌರ ಘಟಕದ ನಿರಂತರ ಕಾರ್ಯನಿರ್ವಹಣೆಗಾಗಿ ಬೀದಿ ದೀಪಗಳಿಗೆ ಈವರೆಗೆ ಸದರಿ ಗ್ರಾಮಕ್ಕಾಗಿ ಭರಿಸಲಾಗುತ್ತಿದ್ದ ವಿದ್ಯುತ್ ಬಿಲ್ಲ್‌ಗೆ ಸಮನಾಗಿರುವ ನಿರ್ದಿಷ್ಟ ಮೊತ್ತದ ಅನುದಾನವನ್ನು ಪ್ರತ್ಯೇಕವಾಗಿ ಕಾಯ್ದಿರಿಸಿ ಜಿಲ್ಲಾ ಪಂಚಾಯತ್ / ಗ್ರಾಮ ಪಂಚಾಯತ್‌ನಿಂದ ತೆಗೆದಿರಿಸಿ ಬ್ಯಾಂಕ್ ಖಾತೆಯಲ್ಲಿ ಉಳಿತಾಯ ಮಾಡತಕ್ಕದ್ದು.

5.2 ಯೋಜನೆಯಡಿ ಆಯ್ಕೆಯಾದ ಗ್ರಾಮದಲ್ಲಿನ ಬೀದಿ ದೀಪಗಳಿಗೆ ಪರ್ಯಾಯವಾಗಿ ಅವಶ್ಯಕತೆಗೆ ತಕ್ಕಂತೆ ಕೇಂದ್ರೀಕೃತ **ಸೌರ ವಿದ್ಯುತ್ ಘಟಕ ಸ್ಥಾಪಿಸಿ,** ಸೌರ ಬೀದಿ ದೀಪಗಳನ್ನು ಅಳವಡಿಸುವುದು.

5.3 ಆಯ್ಕೆಯಾದ ಗ್ರಾಮದಲ್ಲಿ ಈಗ ಅನುಷ್ಠಾನಗೊಳಿಸುತ್ತಿರುವ ನೂತನ ಯೋಜನೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ ನಂತರ ಈಗಿರುವ ಬೀದಿ ದೀಪಗಳಿಗೆ ಗ್ರಿಡ್ ಸಂಪರ್ಕ ಕಡಿತಗೊಳಿಸಿ, ಈ ಬಾಬ್ತು **ವಿದ್ಯುತ್‌ದರ ಉಳಿತಾಯ ಮಾಡುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳತಕ್ಕದ್ದು.**

## 6. ಅನುದಾನ :

2014–15ನೇ ಸಾಲಿನಲ್ಲಿ ಸೌರ ಬೆಳಕು ಯೋಜನೆಗೆ ರಾಜ್ಯ ವಲಯದಡಿ ರೂ.310.00 ಲಕ್ಷಗಳನ್ನು ಲೆಕ್ಕ ಶೀರ್ಷಿಕೆಯಡಿ 2810–00–101–0–91 (2810–01–198–1–01) ರಡಿ ಒದಗಿಸಲಾಗಿದೆ.

## 7. ಇತರೆ ವಿಷಯಗಳು :

7.1 ಯೋಜನೆಯನ್ನು ಅನುಷ್ಠಾನಗೊಳಿಸಲು ತ್ವರಿತವಾಗಿ ಕ್ರಮವಹಿಸಿ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸುವುದು.

7.2 ಯೋಜನೆಯನ್ನು 2014–15ನೇ ಸಾಲಿನಲ್ಲಿಯೇ ಪೂರ್ಣಗೊಳಿಸುವುದು.

7.3 ಪ್ರತಿ ತಿಂಗಳು 5 ನೇ ತಾರೀಕಿನೊಳಗಾಗಿ ಪ್ರಗತಿ ವರದಿಯನ್ನು ಸರಕಾರಕ್ಕೆ ಸಲ್ಲಿಸುವುದು.

7.4 ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯದಿಂದ ಕೇಂದ್ರೀಕೃತ ಸೌರ ಬೀದಿ ದೀಪಗಳ ಘಟಕಗಳನ್ನು ಅಳವಡಿಸುವ ಯೋಜನೆಗೆ ಭರಿಸಲಾಗುವ ವೆಚ್ಚದ ಶೇ. 30% ರಷ್ಟು ಕೇಂದ್ರ ಸಹಾಯಧನವನ್ನು Karnataka Renewable Energy Development Limited. (KREDL) ನಿಗಮದ ಮೂಲಕ ಪಡೆಯಲು ಜಿ.ಪಂ.ನಿಂದ ಯೋಜನೆ ಅನುಷ್ಠಾನದ ಪೂರ್ವದಲ್ಲಿ ಹಾಗೂ ಯೋಜನೆ ಪೂರ್ಣಗೊಂಡ ನಂತರ ಸಹಾಯಧನಕ್ಕಾಗಿ ನಿಗದಿತ ನಮೂನೆಗಳಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸಲು ಕ್ರಮ ಜರುಗಿಸತಕ್ಕದ್ದು.

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಗ್ರಾಮೂಸೌ-2) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು :

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
3. ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು.
4. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
5. ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ / ಯೋಜನಾ ಇಲಾಖೆ.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ, ನಂ. 39, ಶಾಂತಿ ಗೃಹ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು.
8. ನಿರ್ದೇಶಕರು, ಪಂಚಾಯತ್ ರಾಜ್ / ನರೇಗಾ / ಸ್ವಉಕಾ / ಗ್ರಾಮ ಸ್ವರಾಜ್ / ಸುಗ್ರಾಯೋ / ಜಿ.ಪಂ.ಶಾಖೆ / ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
9. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು, ಗದಗ, ಹಾವೇರಿ ಮತ್ತು ಬಾಗಲಕೋಟೆ ಜಿಲ್ಲೆ.
10. ಮುಖ್ಯ ಲೆಕ್ಕಾಧಿಕಾರಿಗಳು / ಉಪ ಕಾರ್ಯದರ್ಶಿಗಳು(ಅಭಿವೃದ್ಧಿ)/ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್ ಮೈಸೂರು, ಗದಗ, ಹಾವೇರಿ ಮತ್ತು ಬಾಗಲಕೋಟೆ ಜಿಲ್ಲೆ.
11. ಜಿಲ್ಲಾ ಖಜಾನಾಧಿಕಾರಿಗಳು, ಮೈಸೂರು, ಗದಗ, ಹಾವೇರಿ ಮತ್ತು ಬಾಗಲಕೋಟೆ ಜಿಲ್ಲೆ.
12. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖನಿಜ ಭವನ, ಸೌತ್ ಎಂಟ್ರೆನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
13. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು (ಪಂ.ರಾ)ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
14. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.

| 2014–15 ನೇ ಸಾಲಿನ *ನೂತನ ಸೌರಬೆಳಕು ಯೋಜನೆ* ಕಾರ್ಯಕ್ರಮ ಅನುಷ್ಠಾನಕ್ಕಾಗಿ ನಿಗದಿಪಡಿಸಿದ ವೇಳಾಪಟ್ಟಿ: | | | |
|---|---|---|---|
| ಕ್ರಸಂ | ಚಟುವಟಿಕೆಗಳು | ಕ್ರಮ | ನಿಗದಿಪಡಿಸಿದ ವೇಳಾಪಟ್ಟಿ |
| 1 | ಯೋಜನೆಯ ಮಾರ್ಗಸೂಚಿಗಳಲ್ಲಿ ಸೂಚಿಸಿದಂತೆ, ಜಿಲ್ಲಾ ಮಟ್ಟದ ಆಯ್ಕೆ/ ಅನುಷ್ಠಾನ ಸಮಿತಿಯ ರಚಿಸಿ, ಪ್ರಥಮ ಸಭೆ ಜರುಗಿಸಿ ನಿಗದಿ ಪಡಿಸಿದ ಮಾನದಂಡ ಗಳಂತೆ, ತಾಲ್ಲೂಕಗಳ ಆಯ್ಕೆ ಪೂರ್ಣಗೊಳಿಸುವುದು. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿ.ಪಂ./ ಜಿಲ್ಲೆಯ ಎಲ್ಲಾ ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾ.ಪಂ.ಗಳು | 30ನೇ ಸೆಪ್ಟೆಂಬರ್ 2014 ರೊಳಗೆ |
| 2 | ಜಿಲ್ಲಾ ಮಟ್ಟದ ಆಯ್ಕೆ/ ಅನುಷ್ಠಾನ ಸಮಿತಿಯ ಸಭೆ ಜರುಗಿಸಿ ಯೋಜನೆಯ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿದ ಮಾನದಂಡಗಳಂತೆ, ಆಯ್ಕೆಯಾದ ತಾಲ್ಲೂಕನಲ್ಲಿ 2 ಗ್ರಾಮಗಳ ಆಯ್ಕೆ ಪೂರ್ಣಗೊಳಿಸುವುದು. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿ.ಪಂ./ ಯೋಜನೆ ಅನುಷ್ಠಾನಕ್ಕಾಗಿ ಆಯ್ದ ತಾಲ್ಲೂಕಿನ ತಾ.ಪಂ ನ ಕಾರ್ಯ ನಿರ್ವಾಹಕ ಅಧಿಕಾರಿ/ ಯೋಜನಾ ಅಭಿಯಂತರ–ಸಗ್ರಾಇಂಕಾ. | 15ನೇ ಅಕ್ಟೋಬರ್ 2014 ರೊಳಗೆ |
| 3 | ಆಯ್ಕೆಯಾದ 2 ಗ್ರಾಮಗಳಲ್ಲಿ ಸೌರ ಬೀದಿ ದೀಪ ಅನುಷ್ಠಾನಕ್ಕಾಗಿ ಯೋಜನಾ ವರದಿ ಮತ್ತು ಕ್ರಿಯಾ ಯೋಜನೆ ತಯಾರಿಕೆ | <u>ಆಯ್ಕೆಯಾದ ತಾಲ್ಲೂಕಿನ :</u> ಯೋಜನಾ ಅಭಿಯಂತರ–ಸಗ್ರಾಇಂಕಾ./ ಪಂಚಾಯತ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ | 31 ನೇ ಅಕ್ಟೋಬರ್ 2014 ರೊಳಗೆ |
| 4 | ಯೋಜನಾ ಮೊತ್ತದ ಶೇ. 30 ರಷ್ಟು ಕೇಂದ್ರ ಸರಕಾರದ ಸಹಾಯಧನಕ್ಕಾಗಿ ಪ್ರಸ್ಥಾವನೆಗಳನ್ನು ಯೋಜನಾವರದಿಯೊಂದಿಗೆ KREDL Bangalore ಪೂರ್ವಭಾವಿಯಾಗಿ ಸಲ್ಲಿಸುವುದು. | ಜಿ.ಪಂ / KREDL Bangalore / ಯೋಜನಾ ಅಭಿಯಂತರ–ಸಗ್ರಾಇಂಕಾ | 31 ನೇ ಅಕ್ಟೋಬರ 2014 ರೊಳಗೆ |
| 5 | ಯೋಜನಾ ವರದಿಯಂತೆ ಯೋಜನಾ ಅನುಷ್ಠಾನಕ್ಕಾಗಿ ಟೆಂಡರ ಷೆಡ್ಯೂಲ್ ತಯಾರಿಸಿ ಇ–ಟೆಂಡರ ಪ್ರಕ್ರಿಯೆ ಜರುಗಿಸಿ, ತಾಂತ್ರಿಕ ಮತ್ತು ಆರ್ಥಿಕ ಬಿಡ್ ಅಂತಿಮಗೊಳಿಸಿ ಅರ್ಹ ಟೆಂಡರದಾರರಿಗೆ ಸರಬರಾಜು ಆದೇಶ ನೀಡುವುದು. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿ.ಪಂ./ ಯೋಜನಾ ಅಭಿಯಂತರ–ಸಗ್ರಾಇಂಕಾ | 2–11–2014 ರಿಂದ 1–12–2014ರೊಳಗೆ ಟೆಂಡರ ಅಂತಿಮ ಗೊಳಿಸತಕ್ಕದ್ದು. |
| 6 | ಅರ್ಹ ಟೆಂಡರದಾರರಿಂದ ಸರಬರಾಜು ಆದೇಶದಂತೆ ಗ್ರಾಮಗಳಲ್ಲಿ ಸೌರ ಬೀದಿ ದೀಪ ಅಳವಡಿಕೆ ನಿಗದಿಪಡಿಸಿದಂತೆ ಪೂರ್ಣಗೊಳಿಸುವುದು. | ಜಿ.ಪಂ / ಆಯ್ದ – ತಾ.ಪಂ./ ಗ್ರಾ.ಪಂ./ ಯೋಜನಾ ಅಭಿಯಂತರ–ಸಗ್ರಾಇಂಕಾ | 2–12–2014 ರಿಂದ ಜನವರಿ 2015 ರೊಳಗೆ |
| 7 | ಯೋಜನೆ ಪೂರ್ಣಗೊಂಡು ಯಶಸ್ವಿ ಕಾರ್ಯಾಚರಣೆಗೊಂಡ ನಂತರ ಗ್ರಾಮಪಂಚಾಯತಗೆ ಹಸ್ತಾಂತರ. | ಯೋಜನಾ ಅಭಿಯಂತರ–ಸಗ್ರಾಇಂಕಾ | 15–2–2015 ರೊಳಗೆ |
| 8 | ಕೇಂದ್ರ ಸರಕಾರಕ್ಕೆ ಶೇ. 30 ರಷ್ಟು ಯೋಜನಾ ಮೊತ್ತಕ್ಕೆ ಸಹಾಯಧನಕ್ಕಾಗಿ ಪ್ರಸ್ಥಾವನೆಗಳನ್ನು KREDL Bangalore ಇವರಿಗೆ ಸಲ್ಲಿಸುವುದು. | ಜಿ.ಪಂ / KREDL Bangalore / ಯೋಜನಾ ಅಭಿಯಂತರ–ಸಗ್ರಾಇಂಕಾ | 15–2–2015 ರೊಳಗೆ |
| 9 | ಯೋಜನೆಯಡಿ ಬಿಡುಗಡೆಯಾದ ಅನುದಾನಕ್ಕೆ ಹಣಬಳಕೆ ಪ್ರಮಾಣಪತ್ರ ಸರಕಾರಕ್ಕೆ ಸಲ್ಲಿಸುವುದು. | ಜಿ.ಪಂ ನಿಂದ. | 25–2–2015 ರೊಳಗೆ |
| 10 | ಯೋಜನೆಯಡಿ ಕಾಲಕಾಲಕ್ಕೆ ನಿಗದಿಪಡಿಸಿದ ನಮೂನೆಗಳಲ್ಲಿ ಸರಕಾರಕ್ಕೆ ಮಾಸಿಕ ಪ್ರಗತಿ ವರದಿಗಳನ್ನು ಸಲ್ಲಿಸುವುದು. | ಜಿ.ಪಂ ನಿಂದ. | ಪ್ರತಿ ತಿಂಗಳು 5ನೇ ತಾರೀಕಿನೊಳಗೆ |